ದಿನಾಂಕಃ 13-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು**: 1** ಮತ್ತು **2** ನೇ ಪ್ರತಿವಾದಿ ಪರ ಶ್ರೀ ಡಿಎಂಜೆ ವಕೀಲರಿಂದ**:**

ಈ ಪ್ರಕರಣದ ವಾದಿ ನನ್ನ ತಾಯಿ, ಅವರು ನಾವಲಗಿ ಗ್ರಾಮದಲ್ಲಿ ವಾಸ ಇರುತ್ತಾರೆ. ವಾದಿಗೆ ಆರೋಗ್ಯ ಸರಿಯಿಲ್ಲದ ಕಾರಣ ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಆಗುವುದಿಲ್ಲ, ಕಾರಣ ನನಗೆ ಸಾಕ್ಷಿ ನುಡಿಯಲು ಅಧಿಕಾರ ಪತ್ರ ನೀಡಿರುತ್ತಾರೆ. ನಮ್ಮ ಮನೆಯಲ್ಲಿ ನಾನು, ನನ್ನ ತಂದೆ-ತಾಯಿ ಮತ್ತು ಸಹೋದರ ವಾಸ ಇರುತ್ತೇವೆ. ಈ ಪ್ರಕರಣದ ವಿಷಯ ನನಗಿಂತ ನನ್ನ ತಂದೆಗೆ ಹೆಚ್ಚಿನ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಪಾರ್ಶ್ವವಾಯು ಹೊಡೆದಿದ್ದರಿಂದ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಆಗುವುದಿಲ್ಲ.

ಈ ದಾವೆಯನ್ನು ನಾನು, ನನ್ನ ತಾಯಿ ಮತ್ತು ಎಲ್ಲರು ಕೂಡಿಕೊಂಡು ಸಲ್ಲಿಸಿರುತ್ತೇವೆ. ನಾನು ಈ ಪ್ರಕರಣದಲ್ಲಿ ವಾದಿ ಇರುತ್ತೇನೆ ಮತ್ತು ವಾದ ಪತ್ರಕ್ಕೆ ಸಹಿ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣವನ್ನು ನಾವು 1 ರಿಂದ 5 ನೇ ಪ್ರತಿವಾದಿಯರ ವಿರುದ್ಧ ಸಲ್ಲಿಸಿರುತ್ತೇವೆ. 5 ನೇ ಪ್ರತಿವಾದಿಯನ್ನು ಯಾವ ಕಾರಣಕ್ಕಾಗಿ ಪಕ್ಷಗಾರರನ್ನಾಗಿ ಮಾಡಿದ್ದೀರಾ ? ಎಂಬ ಪ್ರಶ್ನೆಗೆ ಸಾಕ್ಷಿ ನಮ್ಮ ಜಮೀನಿಗೆ ಹೋಗುವ ದಾರಿಯ ಮೇಲೆ ಪೆಟ್ರೋಲ್ ಪಂಪ್ ಹಾಕುತ್ತಿರುವುದರಿಂದ ಪಕ್ಷಗಾರರನ್ನಾಗಿ ಮಾಡಿರುತ್ತೇವೆ ಎಂದು ಹೇಳುತ್ತಾರೆ. ನಮ್ಮ ಜಮೀನು ಕೆನಾಲಿಗೆ ಹೊಂದಿಕೊಂಡು ಇದೆ ಎಂದರೆ ಸರಿ. ಸದರಿ ಕೆನಾಲಗೆ ಹೊಂದಿಕೊಂಡು ನಮ್ಮ ಮನೆ ಇದೆ ಎಂದರೆ ಸರಿ. ನಾವು ನಮ್ಮ ಮನೆಯಿಂದ ಕೆನಾಲ ಮೂಲಕ ಒಳಗಿಂದ ಹಾಯಿಸಿ ಹನಮಾನ ದೇವರ ಗುಡಿಯ ಕಡೆಗೆ ಹೋಗಲು ರಸ್ತೆ ಇದೆ ಎಂದರೆ ಸರಿ. ಇನ್ನೊಂದು ರಸ್ತೆಯು ಬಲಗಡೆಯಿಂದ ಮುಧೋಳ ಮುಖ್ಯ ರಸ್ತೆಗೆ ಕೂಡುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವು ಎತ್ತರದ ಪ್ರದೇಶದಲ್ಲಿ ಇದೆ ಎಂದು ಹೇಳುತ್ತಾರೆ. ನಾವು ಜಮೀನು ಖರೀದಿ ಮಾಡುವ ಮೊದಲಿನಿಂದಲೂ ಮೇಲಿನ ಎರಡು ರಸ್ತೆಗಳು ಇವೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರ ಜಮೀನು ಕ್ಷೇತ್ರ 2 ಎಕರೆ 30 ಗುಂಟೆ ಇರುತ್ತದೆ. ಪ್ರತಿವಾದಿಯರು ಜಮೀನು ಗುರಲಿಂಗಪ್ಪ ವಾಲಿ ಇವರಿಂದ 30 ವರ್ಷಗಳ ಹಿಂದೆ ಖರೀದಿ ಮಾಡಿರುತ್ತಾರೆ.

ದಾವಾ ನಕಾಶೆ ಉತ್ತರ ಕಡೆಗೆ ಇರುವ ಜಮೀನು ಬಸಪ್ಪ ಗಣಿ ಇವರ ಜಮೀನು ಎಂದರೆ ಸರಿ. ಸದರಿ ಗಣಿಯಮರ ಜಮೀನಿಗೆ ಹೊಂದಿಕೊಂಡು ಪ್ರತಿವಾದಿ ಸಂ.1 ಮತ್ತು 2 ರ ಜಮೀನು ಇದೆ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಯರು ಹಾಕಿದ ಪೆಟ್ರೋಲ್ ಪಂಪ್ ತಮ್ಮ ಜಮೀನಿನ ಆಗ್ನೇಯ ಮೂಲೆಯಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಪೆಟ್ರೋಲ್ ಪಂಪ್‌ನ ಶೇಖರಣಾ ಟಾಕಿಗಳನ್ನು ತಮ್ಮ ಜಮೀನುಗಳಲ್ಲಿ ಹಾಕಿರುತ್ತಾರೆ ಎಂದರೆ ಸರಿ, ಸಾಕ್ಷಿ ಮುಂದುವರೆದು ದಾರಿಯಲ್ಲಿ ಕಂಪೌಂಡ್ ಕಟ್ಟಿರುತ್ತಾರೆ ಎಂದು ಹೇಳುತ್ತಾರೆ. ಆ ಬಗ್ಗೆ ನಾನು ದಾಖಲೆಗಳನ್ನು ಹಾಜರಪಡಿಸಿರುತ್ತೇನೆ. ದಾವಾ ರಸ್ತೆಯು ಅಸ್ತಿತ್ವದಲ್ಲಿದೆ ಎಂದು ತೋರಿಸಲು ದಾಖಲೆಗಳನ್ನು ಹಾಜರಪಡಿಸಿರುತ್ತೇನೆ. ಸಾಕ್ಷಿ ಮುಂದುವರೆದು 1 ಮತ್ತು 2 ನೇ ಪ್ರತಿವಾದಿಯರು ಮಾತ್ರ ರಸ್ತೆ ಬಂದ್ ಮಾಡಿರುತ್ತಾರೆ, 3 ಮತ್ತು 4 ನೇ ಪ್ರತಿವಾದಿಯರ ಜಮೀನಿನ ಪಕ್ಕದಲ್ಲಿ ಇರುವ ರಸ್ತೆ ಚಾಲ್ತಿಯಲ್ಲಿದೆ ಎಂದು ಹೇಳುತ್ತಾರೆ.

ನಮ್ಮ ನಕಾಶೆಯಲ್ಲಿ ನಮ್ಮ ಆಸ್ತಿ ಕೆನಾಲದಿಂದ ಎತ್ತರದ ಪ್ರದೇಶದಲ್ಲಿ ಇದೆ ಎಂದು ತೋರಿಸಿರುವುದಿಲ್ಲ. ನ್ಯಾಯಾಲಯದ ಕಮೀಶನರ ಸಲ್ಲಿಸಿದ ನಕಾಶೆಯಲ್ಲಿ ಜಿಎಲ್‌ಬಿಸಿ ಕಾಲುವೆಯ ಪ್ಯಾಸೆಜ್ ಇರುವುದು ತೋರಿಸಿರುವುದು ಸರಿ ಇರುತ್ತದೆ. ಸದರಿ ಕಮೀಷನರ ನಕಾಶೆಯ ಪ್ರಕಾರ ಜಿಎಲ್ ಬಿಸಿ ಕಾಲುವೆಯ ಪಕ್ಕದಲ್ಲಿ ಹಾಯ್ದು ಹೋಗಲು ರಸ್ತೆ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಜಿಎಲ್ ಬಿಸಿ ಕೆನಾಲಗೆ ಹೊಂದಿಕೊಂಡು ಕಾಲುದಾರಿ ಇದೆ ಎಂದು ನನ್ನ ವಾದ ಪತ್ರದಲ್ಲಿ ಹೇಳಿರುವುದಿಲ್ಲ. 1 ಮತ್ತು 2 ನೇ ಪ್ರತಿವಾದಿಯರು ತಮ್ಮ ಆಸ್ತಿಯಲ್ಲಿ ಪೆಟ್ರೋಲ್ ಪಂಪ್ ಹಾಕಬಾರದೆಂಬ ದುರುದ್ದೇಶದಿಂದ ಅವರಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಜಿಎಲ್ ಬಿಸಿ ಕಾಲುವೆಯ ಎರಡೂ ಕಡೆ ಹಾಯ್ದು ಹೋಗಲು ರಸ್ತೆ ಇದೆ ಎಂದರೆ ಸರಿ. ಪ್ರತಿವಾದಿಯರ ಜಮೀನಿನಲ್ಲಿ ಯಾವುದೆ ದಾರಿ ಇರುವುದಿಲ್ಲ, ಅವರು ಪೆಟ್ರೋಲ್ ಪಂಪ್ ಹಾಕಬಾರದೆಂಬ ದುರುದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಮೀಷನರ ಸ್ಥಾನಿಕವಾಗಿ ಪರಿಶೀಲನೆ ಮಾಡಿದಾಗ ನಾವು ಮತ್ತು ಪ್ರತಿವಾದಿಯರು ಹಾಜರಿದ್ದೆವು. ದಾವಾ ರಸ್ತೆಯಲ್ಲಿ ನಾವು ಎಂದೂ ಹೋಗಿ ಬರುವುದು ಮಾಡಿರುವುದಿಲ್ಲ ಹಾಗೂ ದಾವಾ ರಸ್ತೆ ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಮಗೆ ಮಾರಾಟ ಮಾಡಿದವರು, ನಮ್ಮ ಆಸ್ತಿಗೆ ಜಿಎಲ್ ಬಿಸಿ ಕೆನಾಲ ಮೂಲಕ ಹಾಯ್ದು ಹೋಗಿ ಬರುವುದು ಮಾಡುತ್ತಿದ್ದರು, ನಾವೂ ಕೂಡ ಸದರಿ ರಸ್ತೆಯ ಮೂಲಕ ನಮ್ಮ

ಜಮೀನಿಗೆ ಹೋಗಿ ಬರುವುದು ಮಾಡುತ್ತೇವೆ ಎಂದರೆ ಸರಿಯಲ್ಲ.

1 ಮತ್ತು 2 ನೇ ಪ್ರತಿವಾದಿಯರಿಗಿಂತ ಮೊದಲೇ ನಾವು ಜಮೀನು ಖರೀದಿ ಮಾಡಿರುತ್ತೇವೆ. ನಾವು ಜಮೀನು ಖರೀದಿಸಿದ 25 ವರ್ಷಗಳ ನಂತರ 1 ಮತ್ತು 2 ನೇ ಪ್ರತಿವಾದಿಯರು ಜಮೀನು ಖರೀದಿ ಮಾಡಿರುತ್ತಾರೆ. ನಮಗೆ ಜಮೀನು ಮಾರಾಟ ಮಾಡಿದವರು ಮತ್ತು 1 ಮತ್ತು 2 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದವರು ಒಂದೇ ಕುಟುಂಬದವರು ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಯರು ಖರೀದಿಸಿದ ಪತ್ರದಲ್ಲಿ ದಾವಾ ರಸ್ತೆ ಇರುವ ಕುರಿತು ನಮೂದು ಇಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರು ಯಾವುದೇ ಜಮೀನು ಅತೀಕ್ರಮಣ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರು ಹಾಕಿದ ಪೆಟ್ರೋಲ್ ಪಂಪ್ ಹಾಗೂ 3 ಮತ್ತು 4 ನೇ ಪ್ರತಿವಾದಿಯರ ಜಮೀನಿನ ಮಧ್ಯೆ ಸುಮಾರು 12-15 ಅಡಿ ಅಂತರ ಇದೆ ಎಂದರೆ ಸರಿಯಲ್ಲ. ದಾವಾ ರಸ್ತೆ ಎಂದೂ ಅಸ್ತಿತ್ವದಲ್ಲಿಲ್ಲ ಎಂದರೆ ಸರಿಯಲ್ಲ. ನಾವು ದಾವಾ ಸಲ್ಲಿಸುವ ಮೊದಲು 5 ನೇ ಪ್ರತಿವಾದಿಗೆ ನೋಟಿಸ ಕೊಟ್ಟಿರುತ್ತೇವೆ. ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA Date: 2026.01.13 17:52:45 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ